# ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ

ವಿಷಯ: e-Procurement ಕಾರ್ಯಗಳಿಗೆ ಸಂಬಂಧಿಸಿದಂತೆ Digital Keyಗೆ Encryption Key ಪಡೆದುಕೊಳ್ಳಲು, ಮ್ಯಾಪಿಂಗ್ ಮಾಡಿಸಲು ಮತ್ತು ತಂತ್ರಾಂಶ ಬಳಕೆ ಕುರಿತು ತರಬೇತಿ ಆಯೋಜಿಸಲು ನೋಡಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 178 ಗ್ರಾಪಂಅ 2023, ಬೆಂಗಳೂರು, ದಿನಾಂಕ:29-03-2023.

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀನದ ಗ್ರಾಮ ಪಂಚಾಯತಿಗಳಿಂದ ಇ-ಸಂಗ್ರಹಣಾ (e-Procurement) ತಂತ್ರಾಂಶದಲ್ಲಿ ಆಹ್ವಾನಿಸಲಾಗುವ ಟೆಂಡರುಗಳಿಗೆ ಆಯಾ ಪ್ರಾಧಿಕಾರಗಳ ಆರ್ಥಿಕ ಮಿತಿಗಳ ಆಧಾರದಲ್ಲಿ ಆಹ್ವಾನಿಸುವ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ನೇಮಿಸಿ ಆದೇಶಿಸಲಾಗಿರುತ್ತದೆ.

ಈ ಕುರಿತು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಇ-ಸಂಗ್ರಹಣಾ (e-Procurement) ತಂತ್ರಾಂಶದಲ್ಲಿ ಟೆಂಡರ್ ಆಹ್ವಾನಿಸಲು, ಟೆಂಡರ್ ಪ್ರಕಟಣೆ, ಪರಿಶೀಲನೆ ಮತ್ತು ಅನುಮೋದನೆ ಇತ್ಯಾದಿ ಕಾರ್ಯಗಳಿಗೆ Digital Key ಬಳಸಬೇಕಾಗಿರುವುದರಿಂದ, Digital Key ಹಾಗೂ User ID ನೀಡಲು ಸದರಿ Digital Keyಗೆ, Encryption Keyಯನ್ನು e-Procurement websiteನಿಂದ ಪಡೆಯಲು ಮತ್ತು ಸದರಿ Encryption Keyಗಳನ್ನು mapping ಮಾಡಿಸಲು, ಸೂಕ್ತ ಕ್ರಮವಹಿಸಲು ಹಾಗೂ e-Procurement ತಂತ್ರಾಂಶವನ್ನು ಬಳಕೆ ಮಾಡಲು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಇ-ಆಡಳಿತ ಕೇಂದ್ರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇವರಿಂದ ತರಬೇತಿ ಆಯೋಜಿಸಲು ಹಾಗೂ ಸಮನ್ವಯ ಮಾಡಲು, ಜಿಲ್ಲಾ ಪಂಚಾಯತಿ ಹಂತದ ಅಧಿಕಾರಿಯೋರ್ವರನ್ನು ನೇಮಿಸುವ ಅವಶ್ಯಕತೆಯಿರುತ್ತದೆ.

ಅದರಂತೆ, ಆಯಾ ಜಿಲ್ಲಾ ಪಂಚಾಯತಿಗಳ ಉಪ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿ (ಅಭಿವೃದ್ಧಿ), ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸುವ ಕುರಿತಾಗಿ ಈ ಆದೇಶ.

**ಆದೇಶ ಸಂಖ್ಯೆ: ಕೆಪಿಆರ್‌ಸಿ-ಜಿಪಿಎ-ಪಿಡಿಓ-95-2022-ಡಿಡಿ3, ದಿನಾಂಕ:12-04-2023.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಇ-ಸಂಗ್ರಹಣಾ (e-Procurement) ತಂತ್ರಾಂಶದಲ್ಲಿ ಟೆಂಡರ್ ಆಹ್ವಾನಿಸಲು, ಟೆಂಡರ್ ಪ್ರಕಟಣೆ, ಪರಿಶೀಲನೆ ಮತ್ತು ಅನುಮೋದನೆ ಇತ್ಯಾದಿ ಕಾರ್ಯಗಳಿಗೆ Digital Key ಬಳಸಬೇಕಾಗಿರುವುದರಿಂದ, Digital Key ಹಾಗೂ User ID ನೀಡಲು, ಸದರಿ Digital Keyಗೆ, Encryption Keyಯನ್ನು e-Procurement websiteನಿಂದ ಪಡೆಯಲು ಮತ್ತು ಸದರಿ Encryption Keyಗಳನ್ನು mapping ಮಾಡಿಸಲು, ಸೂಕ್ತ ಕ್ರಮವಹಿಸಲು ಹಾಗೂ e-Procurement ತಂತ್ರಾಂಶವನ್ನು ಬಳಕೆ ಮಾಡಲು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ

ಇ-ಆಡಳಿತ ಕೇಂದ್ರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇವರಿಂದ ತರಬೇತಿ ಆಯೋಜಿಸಲು ಹಾಗೂ ಸಮನ್ವಯ ಮಾಡಲು, ಆಯಾ ಜಿಲ್ಲಾ ಪಂಚಾಯತಿಗಳ ಉಪ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿ (ಅಭಿವೃದ್ಧಿ), ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

**ಆಯುಕ್ತರು,**
ಪಂಚಾಯತ್ ರಾಜ್ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಉಪ ಕಾರ್ಯದರ್ಶಿಗಳು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ:

1. ನಿರ್ದೇಶಕರು (ಇ-ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಯೋಜನಾ ನಿರ್ದೇಶಕರು, ಇ-ಸಂಗ್ರಹಣಾ ಕೋಶ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.
3. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ನಿರ್ದೇಶಕರು (ಅಭಿವೃದ್ಧಿ), ನಿರ್ದೇಶಕರು (ಆಡಳಿತ-1/ ಆಡಳಿತ-2), ಉಪ ಕಾರ್ಯದರ್ಶಿ (ಆಡಳಿತ), ಪಂಚಾಯತ್ ರಾಜ್ ಆಯುಕ್ತಾಲಯ.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಸಂಪಾದಕರು, ಕರ್ನಾಟಕ ವಿಕಾಸ, ಪಂಚಾಯತ್ ರಾಜ್ ಆಯುಕ್ತಾಲಯ.
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ).